ದಿಃ 04.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರವಾಗಿ ಶ್ರೀ ಆರ್.ಜಿ.ಪಿ. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂದಪಟ್ಟಂತೆ ಶಪಥಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದ ಅಂಶಗಳು ಸತ್ಯವಾಗಿರುತ್ತದೆ, ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಸಲ್ಲಿಸಿರುವ ಅರ್ಜಿಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಲಾಯಿತು. ನಾಲ್ಕು ಅವಾರ್ಡ ನೋಟೀಸಗಳನ್ನು ಒಟ್ಟಾಗಿ ನಿಪಿ-5 ಎಂದು, ಆ ಕುರಿತು ಜಮೀನಿನ ಪಹಣಿ ಪತ್ರಿಕೆಗಳನ್ನು ನಾಲ್ಕು ಒಟ್ಟಾಗಿ ನಿಪಿ-6 ಎಂದು, ಬಿ.ಟಿ.ಡಿ.ಎ ಮಾಸ್ಟರ ಪ್ಲಾನ ದೃಢಿಕೃತ ನಕಲನ್ನು ನಿಪಿ-7 ಎಂದು, ದಿಃ 09.01.2026 ರ ಆಯುಕ್ತರ ಪತ್ರ ಹಾಗೂ ಕರ್ನಾಟಕ ರಾಜ್ಯ ಪತ್ರವನ್ನು ಒಟ್ಟಾಗಿ ನಿಪಿ-8 ಎಂದು (ಪುಟಗಳು-1 ರಿಂದ 8), ಛಬ್ಬಿ ಗ್ರಾಮದ ಗ್ರಾಮ ನಕಾಶೆಯ ದೃಢಿಕೃತ ನಕಲನ್ನು ನಿಪಿ-9 ಎಂದು, ಆರು ಕ್ರಯಪತ್ರಗಳ ದೃಢಿಕೃತ ನಕಲನ್ನು ನಿಪಿ-10 ರಿಂದ 15 ಎಂದು, ಒಟ್ಟು ಐದು ಐತೀರ್ಪುಗಳನ್ನು ನಿಪಿ-16 ರಿಂದ 20 ಎಂದು, ಎನ್.ಎ. ಆದೇಶದ ದೃಢಿಕೃತ ಪ್ರತಿಯನ್ನು ನಿಪಿ-21 ಎಂದು, ಪಹಣಿ ಪತ್ರಿಕೆಯನ್ನು ನಿಪಿ-22 ಎಂದು, ಎರಡು ರಾಜಿ ಐತೀರ್ಪಿನ ದೃಢಿಕೃತ ನಕಲನ್ನು ಒಟ್ಟಾಗಿ ನಿಪಿ-23 ಎಂದು, ಅವಾರ್ಡ ಪ್ರತಿಯ ದೃಢಿಕೃತ ನಕಲನ್ನು ನಿಪಿ-24, ಇನ್ನೊಂದು ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನಿಪಿ-25 ಎಂದು, ಬಿ.ಟಿ.ಡಿ.ಎ ದರಪಟ್ಟಿ ಎರಡು ಒಟ್ಟಾಗಿ ನಿಪಿ-26 ಎಂದು ಗುರುತಿಸಲಾಯಿತು. ಕಲಂ-65(ಬಿ) ರಡಿ ಶಪಥಪತ್ರ ಸಲ್ಲಿಸಿದ್ದೇನೆ. ನಾನು ಅರ್ಜಿಯಲ್ಲಿ ಕೋರಿದಂತೆ ಪರಿಹಾರ ನೀಡಬೇಕಾಗಿ ವಿನಂತಿ.

**ಪಾಟೀ ಸವಾಲುಃ** ಎದುರುದಾರರ ಪರವಾಗಿ

ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.